# ಪಿ.ಎ.ಎಂ. ಸರ್ಕಾರಿ ಪ್ರೌಢಶಾಲೆ ಬನ್ನಿಕಲ್ಲು, ಹ ಬೊ ಹಳ್ಳಿ(ತಾ), ಬಳ್ಳಾರಿ(ಜಿ)

ವಿಷಯ:- ಸಮಾಜ ವಿಜ್ಞಾನ ಪ್ರಥಮ ಸೆಮಿಸ್ಟರ್ ಪರೀಕ್ಷೆ ಅಂಕ:-40

ತರಗತಿ:- 8ನೇ ತರಗತಿ ಸಮಯ:-90ನಿ

**I. ಈ ಕೆಳಗಿನ ಬಹುಆಯ್ಕೆ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:** 6X1=6

1. ಈ ಕೆಳಗಿನ ಯಾರನ್ನು ರಾಜ್ಯಶಾಸ್ತ್ರದ ಪಿತಾಮಹ ಎಂದು ಕರೆಯುತ್ತೇವೆ.
   ಎ) ಆ್ಯಡಂ ಸ್ಮಿತ್ ಬಿ) ಅರಿಸ್ಟಾಟಲ್ ಸಿ) ಪ್ಲೇಟೋ ಡಿ) ಆಗಸ್ಟ್ ಕಾಮ್ಟೆ
2. ವಿದೇಶಿ ಸಾಹಿತ್ಯಕ್ಕೆ ಉತ್ತಮ ಉದಾಹರಣೆ
   ಎ) ಇಂಡಿಕಾ ಬಿ) ಪೃಥ್ವಿರಾಜ್ ರಾಸೋ ಸಿ) ಮುದ್ರಾರಾಕ್ಷಸ ಡಿ) ಅರ್ಥಶಾಸ್ತ್ರ
3. ಲಾಗೋಸ್ ಎಂದರೆ
   ಎ) ನಗರ ರಾಜ್ಯ ಬಿ) ಪೋಷಿಸು ಸಿ) ಶಾಸ್ತ್ರ ಡಿ) ಜೊತೆಗಾರ
4. ಭಾರತವು ಈ ಕೆಳಗಿನ ಯಾವ ಬಗೆಯ ಅರ್ಥವ್ಯವಸ್ಥೆಯನ್ನು ಹೊಂದಿದೆ.
   ಎ) ಬಂಡವಾಳಶಾಹಿ ಬಿ) ಸಮಾಜವಾದಿ ಸಿ) ಮಿಶ್ರ ಆರ್ಥಿಕತೆ ಡಿ) ಸಮತಾವಾದ
5. ರೋಮನ್ನರ ಭಾಷೆ
   ಎ) ಲ್ಯಾಟೀನ್ ಬಿ) ಗ್ರೀಕ್ ಸಿ) ಇಂಗ್ಲೀಷ್ ಡಿ) ಸಂಸ್ಕೃತ
6. 'ಜಾತಿ ವಿನಾಶ' ಗ್ರಂಥದ ಕರ್ತೃ
   ಎ) ಇರಾವತಿ ಕರ್ವೆ ಬಿ) ಎ.ಆರ್. ದೇಸಾಯಿ ಸಿ) ಎಂ.ಎನ್. ಶ್ರೀನಿವಾಸನ್ ಡಿ) ಬಿ.ಆರ್. ಅಂಬೇಡ್ಕರ್

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ:** 7X1=7

7. ಆರ್ಥಿಕ ಚಟುವಟಿಕೆಗಳೆಂದರೇನು?
8. ಮಾಯನ್ನರು ಯಾರು?
9. ಭಾರತವನ್ನು 'ಪರ್ಯಾಯ ದ್ವೀಪ'ವೆಂದು ಕರೆಯಲು ಕಾರಣವೇನು?
10. ಭೂಮಿಯನ್ನು 'ಜೀವಂತ ಗ್ರಹ'ವೆಂದು ಏಕೆ ಕರೆಯುತ್ತಾರೆ?
11. ಪ್ರಾಗೈತಿಹಾಸಿಕ ಕಾಲವನ್ನು ಅರ್ಥೈಸಿರಿ.
12. ಅಭೌತಿಕ ಸಂಸ್ಕೃತಿಗೆ ಒಂದು ಉದಾಹರಣೆ ಕೊಡಿ.
13. ಆಧಾರ ಎಂದರೇನು? ಅಥವಾ 'ಮಮ್ಮಿ' ಎಂದರೇನು?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:** 6X2=12

14. ಹವಾಂಗೋ ನದಿಯು 'ಚೀನಾದ ದುಗುಡ' ಹೇಗೆ?
15. ರಾಜ್ಯಶಾಸ್ತ್ರ ಅಧ್ಯಯನದ ಯಾವುದಾದರೂ ಎರಡು ಪ್ರಯೋಜನಗಳನ್ನು ವಿವರಿಸಿ.
16. ಸಂಸ್ಕೃತಿ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹೇಗೆ?
17. ಸ್ಥಾನಿಕ ವೇಳೆ ಮತ್ತು ಆದರ್ಶ ವೇಳೆಗೂ ಇರುವ ವ್ಯತ್ಯಾಸವೇನು?
18. ಅಭಿವೃದ್ಧಿ ಮಟ್ಟದ ಆಧಾರದ ಮೇಲೆ ಆರ್ಥಿಕ ವ್ಯವಸ್ಥೆಯ ಪ್ರಕಾರಗಳನ್ನು ಹೆಸರಿಸಿ.
19. ವ್ಯಾಪಾರ ಪೂರಕ ಅಂಶಗಳಾವುವು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿರಿ:** 3X3=9

20. ಪಶು ಸಂಗೋಪನೆ ಮತ್ತು ಹೈನುಗಾರಿಕೆಯು ಹೇಗೆ ಪ್ರಾರಂಭವಾಯಿತು. ವಿವರಿಸಿ. ಅಥವಾ ನೇಮಕಾತಿ ವಿಧಾನಗಳ ಕುರಿತು ವಿವರಿಸಿ.
21. ಸಮಾಜಶಾಸ್ತ್ರದ ಮಹತ್ವವನ್ನು ತಿಳಿಸಿ. ಅಥವಾ ಭೂ ನಗ್ನೀಕರಣದ ಕರ್ತೃವಾಗಿ ನದಿಗಳು ನಿರ್ಮಿಸುವ ಭೂ ಸ್ವರೂಪಗಳನ್ನು ತಿಳಿಸಿ.
22. ಅರ್ಥಶಾಸ್ತ್ರ ಅಧ್ಯಯನವನ್ನು ಏಕೆ ಮಾಡಬೇಕು? ಅಥವಾ ವಸ್ತು ವಿನಿಮಯ ಪದ್ಧತಿಯು ಸೂಕ್ತವಲ್ಲ ಏಕೆ?

**V. ಈ ಕೆಳಗಿನ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:** 4X1=4

23. ಹರಪ್ಪ ನಾಗರೀಕತೆಯ ನಗರ ಯೋಜನೆಯನ್ನು ವಿವರಿಸಿ.

**VI.** 24ಭೂಗೋಳದ ಚಿತ್ರವನ್ನು ರಚಿಸಿ ಇವುಗಳನ್ನು ಗುರುತಿಸಿ. ಎ)ಸಮಭಾಜಕ ವೃತ್ತ ರೇಖೆ ಬಿ) ಉತ್ತರ ಧೃವ 1+1=2

# ಪಿ.ಎ.ಎಂ ಸರ್ಕಾರಿ ಪ್ರೌಢಶಾಲೆ ಬನ್ನಿಕಲ್ಲು, ಹ ಬೊ ಹಳ್ಳಿ(ತಾ), ಬಳ್ಳಾರಿ(ಜಿ)

ಸಂಕಲನಾತ್ಮಕ ಮೌಲ್ಯಮಾಪನ-1

ಪ್ರಥಮ ಸೆಮಿಸ್ಟರ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ನೀಲನಕ್ಷೆ

**ತರಗತಿ: 8ನೇ ತರಗತಿ** **ವಿಷಯ: ಸಮಾಜ ವಿಜ್ಞಾನ**

**ಸಾಮರ್ಥ್ಯವಾರು ಅಂಕ ಹಂಚಿಕೆ**

| | ಸಾಮರ್ಥ್ಯ | ಅಂಕ | ಶೇಕಡವಾರು |
|---|---|---|---|
| 01 | ಜ್ಞಾನ | 12 | 30% |
| 02 | ತಿಳುವಳಿಕೆ | 16 | 40% |
| 03 | ಅನ್ವಯ | 10 | 25% |
| 04 | ಕೌಶಲ | 02 | 5% |

**ಕ್ಲಿಷ್ಟಾನುಸಾರ ಅಂಕ ಹಂಚಿಕೆ**

| | | ಅಂಕಗಳು | ಶೇಕಡವಾರು |
|---|---|---|---|
| 01 | ಸುಲಭ | 06 | 30% |
| 02 | ಸಾಮಾನ್ಯ | 09 | 45% |
| 03 | ಕಠಿಣ | 05 | 25% |

**ಪ್ರಶ್ನಾನುಸಾರ ಅಂಕ ಹಂಚಿಕೆ**

| | ಪ್ರಶ್ನೆಗಳು | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 01 | ಬಹುಆಯ್ಕೆ ಪ್ರಶ್ನೆಗಳು | 06 | 06 |
| 02 | ಕಿರು ಉತ್ತರದ ಪ್ರಶ್ನೆಗಳು | 07 | 07 |
| 03 | ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು | 06 | 12 |
| 04 | ದೀರ್ಘ ಉತ್ತರದ ಪ್ರಶ್ನೆಗಳು-1 | 03 | 09 |
| 05 | ದೀರ್ಘ ಉತ್ತರದ ಪ್ರಶ್ನೆಗಳು-2 | 01 | 04 |
| 06 | ನಕ್ಷೆ | 01 | 02 |
| | ಒಟ್ಟು | 24 | 40 |

**ವಿಷಯಾನುಸಾರ ಅಂಕ ಹಂಚಿಕೆ**

| | ಪ್ರಶ್ನೆಗಳ ಮಾದರಿಗಳು | ಬ.ಪ್ರ | ಕಿ.ಉ.ಪ್ರ | ಸ.ಉ.ಪ್ರ | ದೀ.ಉ.ಪ್ರ1 | ದೀ.ಉ.ಪ್ರ2 | ನಕ್ಷೆ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|---|---|
| 01 | ಇತಿಹಾಸ | 02 | 04 | 01 | --- | 01 | --- | 08 | 12 |
| 02 | ರಾಜ್ಯಶಾಸ್ತ್ರ | 01 | --- | 01 | 01 | --- | --- | 03 | 06 |
| 03 | ಸಮಾಜಶಾಸ್ತ್ರ | 02 | 01 | 01 | --- | --- | --- | 04 | 05 |
| 04 | ಭೂಗೋಳಶಾಸ್ತ್ರ | --- | 01 | 01 | 01 | --- | 01 | 04 | 08 |
| 05 | ಅರ್ಥಶಾಸ್ತ್ರ | 01 | --- | 01 | 01 | --- | --- | 03 | 06 |
| 06 | ವ್ಯವಹಾರ ಅಧ್ಯಯನ | --- | 01 | 01 | --- | --- | --- | 02 | 03 |
| | ಒಟ್ಟು | 06 | 07 | 06 | 03 | --- | 01 | 24 | 40 |

# ಘಟಕವಾರು ಅಂಕ ಹಂಚಿಕೆ


| ಕ್ರ. ಸಂ | ಘಟಕಗಳು | ಜ್ಞಾನ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ್ಯ | | | | | ಒಟ್ಟು ಪ್ರಶ್ನೆ | ಒಟ್ಟು ಅಂಕ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 01 | 02 | 03 | 04 | 05 | 01 | 02 | 03 | 04 | 05 | 01 | 02 | 03 | 04 | 05 | 01 | 02 | 03 | 04 | 05 | | |
| 1 | ಆಧಾರಗಳು | 1(1) | | | | | | 1(1) | | | | | | | | | | | | | | 02 | 02 |
| 2 | ಭೌಗೋಳಿಕ ಲಕ್ಷಣಗಳು ಹಾಗೂ ಚರಿತ್ರೆ ಪೂರ್ವ ಭಾರತ | | | | | | | 1(1) | | 1(3) | | | 1(1) | | | | | | | | | 02 | 02 |
| 3 | ಭಾರತದ ಪ್ರಾಚೀನ ನಾಗರಿಕತೆಗಳು | | | | | | | | | | 1(4) | | | | | | | | | | | 01 | 04 |
| 4 | ಜಗತ್ತಿನ ಪ್ರಾಚೀನ ನಾಗರಿಕತೆಗಳು | | | | | | | 1(1) | | | | | | 1(2) | | | | | | | | 01 | 02 |
| 5 | ಗ್ರೀಕ್, ರೋಮನ್ ಹಾಗೂ ಅಮೆರಿಕದ ನಾಗರಿಕತೆ | 1(1) | 1(1) | | | | | | | | | | | | | | | | | | | 02 | 02 |
| 6 | ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯತೆ | 1(1) | | | | | | | 1(2) | | | | | | | | | | | | | 02 | 03 |
| 7 | ಸಾರ್ವಜನಿಕ ಆಡಳಿತ | | | | | | | | | 1(3) | | | | | | | | | | | | 01 | 03 |
| 8 | ಸಮಾಜಶಾಸ್ತ್ರ ಪರಿಚಯ | 1(1) | | | 1(3) | | 1(1) | | | | | | | | | | | | | | | 02 | 02 |
| 9 | ಸಂಸ್ಕೃತಿ | | | | | | | | | | | | 1(1) | 1(2) | | | | | | | | 02 | 03 |
| 10 | ಭೂಮಿ–ನಮ್ಮ ಜೀವಂತ ಗ್ರಹ | | | | | | | | | | | | 1(1) | 1(2) | | | 1(2)* | | | | | 02 | 03 |
| 11 | ಶಿಲಾಗೋಳ | | | | 1(3) | | | | | | | | | | | | | | | | | 02 | 05 |
| 12 | ಅರ್ಥಶಾಸ್ತ್ರದ ಪರಿಚಯ | | | | | | | | | 1(3) | | | | | | | | | | | | 01 | 03 |
| 13 | ಅರ್ಥವ್ಯವಸ್ಥೆಯ ಅರ್ಥ ಮತ್ತು ಪ್ರಕಾರಗಳು | | | 1(2) | | | | | | | | 1(1) | | | | | | | | | | 02 | 03 |
| 14 | ವಾಣಿಜ್ಯ ಅಧ್ಯಯನ ಘಟಕಗಳು | | | 1(2) | | | | 1(1) | | 1(3) | | | | | | | | | | | | 02 | 03 |
| | ಒಟ್ಟು | 4(4) | 1(1) | 2(4) | 1(3) | | 1(1) | 3(3) | 1(2) | 2(6) | 1(4) | 1(1) | 3(3) | 3(6) | | | 1(2) | | | | | 24 | 40 |

# ಪ್ರಶ್ನೆ ಪತ್ರಿಕೆ ವಿಶ್ಲೇಷಣೆ

| ಪ್ರಶ್ನೆ ಸಂಖ್ಯೆ | ಘಟಕ | ಉದ್ದೇಶ | ನಿರೀಕ್ಷಿತ ಫಲ | ಪ್ರಶ್ನೆ ವಿಧ | ಅಂಕ | ಕಾಲ | ಪ್ರಶ್ನೆಯ ಕ್ಲಿಷ್ಟತೆ |
|---|---|---|---|---|---|---|---|
| 1 | ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯತೆ | ಜ್ಞಾನ | ಸ್ಮರಿಸುವನು | ಬಹು ಆಯ್ಕೆ | 1 | 2ನಿ | ಸುಲಭ |
| 2 | ಆಧಾರಗಳು | ಜ್ಞಾನ | ಗುರುತಿಸುವನು | ಬಹು ಆಯ್ಕೆ | 1 | 2ನಿ | ಸಾಮಾನ್ಯ |
| 3 | ಸಮಾಜಶಾಸ್ತ್ರ ಪರಿಚಯ | ತಿಳುವಳಿಕೆ | ಅರ್ಥೈಸುವನು | ಬಹು ಆಯ್ಕೆ | 1 | 2ನಿ | ಕಠಿಣ |
| 4 | ಅರ್ಥವ್ಯವಸ್ಥೆಯ ಅರ್ಥ ಮತ್ತು ಪ್ರಕಾರಗಳು | ಅನ್ವಯ | ಅನ್ವಯಿಸುವನು | ಬಹು ಆಯ್ಕೆ | 1 | 2ನಿ | ಸಾಮಾನ್ಯ |
| 5 | ಗ್ರೀಕ್, ರೋಮನ್ ಹಾಗೂ ಅಮೆರಿಕದ ನಾಗರಿಕತೆ | ಜ್ಞಾನ | ಸ್ಮರಿಸುವನು | ಬಹು ಆಯ್ಕೆ | 1 | 2ನಿ | ಸಾಮಾನ್ಯ |
| 6 | ಸಮಾಜಶಾಸ್ತ್ರ ಪರಿಚಯ | ಜ್ಞಾನ | ಸ್ಮರಿಸುವನು | ಬಹು ಆಯ್ಕೆ | 1 | 2ನಿ | ಸುಲಭ |
| 7 | ವಾಣಿಜ್ಯ ಅಧ್ಯಯನ ಘಟಕಗಳು | ತಿಳುವಳಿಕೆ | ಅರ್ಥೈಸುವನು | ಕಿರು ಉತ್ತರ | 1 | 2ನಿ | ಸುಲಭ |
| 8 | ಗ್ರೀಕ್, ರೋಮನ್ ಹಾಗೂ ಅಮೆರಿಕದ ನಾಗರಿಕತೆ | ಜ್ಞಾನ | ಸ್ಮರಿಸುವನು | ಕಿರು ಉತ್ತರ | 1 | 2ನಿ | ಸಾಮಾನ್ಯ |
| 9 | ಭೌಗೋಳಿಕ ಲಕ್ಷಣಗಳು ಹಾಗೂ ಚರಿತ್ರೆ ಪೂರ್ವ ಭಾರತ | ಅನ್ವಯ | ಕಾರಣ ನೀಡುವನು | ಕಿರು ಉತ್ತರ | 1 | 2ನಿ | ಸುಲಭ |
| 10 | ಭೂಮಿ–ನಮ್ಮ ಜೀವಂತ ಗ್ರಹ | ಅನ್ವಯ | ಕಾರಣ ನೀಡುವನು | ಕಿರು ಉತ್ತರ | 1 | 2ನಿ | ಸುಲಭ |
| 11 | ಭೌಗೋಳಿಕ ಲಕ್ಷಣಗಳು ಹಾಗೂ ಚರಿತ್ರೆ ಪೂರ್ವ ಭಾರತ | ತಿಳುವಳಿಕೆ | ಅರ್ಥೈಸುವನು | ಕಿರು ಉತ್ತರ | 1 | 2ನಿ | ಸಾಮಾನ್ಯ |
| 12 | ಸಂಸ್ಕೃತಿ | ಅನ್ವಯ | ಉದಾಹರಿಸುವನು | ಕಿರು ಉತ್ತರ | 1 | 2ನಿ | ಸುಲಭ |
| 13 | ಆಧಾರಗಳು<br>ಜಗತ್ತಿನ ಪ್ರಾಚೀನ ನಾಗರಿಕತೆಗಳು | ತಿಳುವಳಿಕೆ | ಅರ್ಥೈಸುವನು | ಕಿರು ಉತ್ತರ | 1 | 2ನಿ | ಸುಲಭ |
| 14 | ಜಗತ್ತಿನ ಪ್ರಾಚೀನ ನಾಗರಿಕತೆಗಳು | ಅನ್ವಯ | ಕಾರಣ ನೀಡುವನು | ಸಂಕ್ಷಿಪ್ತ ಉತ್ತರ | 2 | 5ನಿ | ಕಠಿಣ |
| 15 | ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯತೆ | ತಿಳುವಳಿಕೆ | ವಿವರಿಸುವನು | ಸಂಕ್ಷಿಪ್ತ ಉತ್ತರ | 2 | 5ನಿ | ಸಾಮಾನ್ಯ |
| 16 | ಸಂಸ್ಕೃತಿ | ಅನ್ವಯ | ಸಮರ್ಥಿಸುವನು | ಸಂಕ್ಷಿಪ್ತ ಉತ್ತರ | 2 | 5ನಿ | ಕಠಿಣ |
| 17 | ಭೂಮಿ–ನಮ್ಮ ಜೀವಂತ ಗ್ರಹ | ಅನ್ವಯ | ವ್ಯತ್ಯಾಸ ತಿಳಿಸುವನು | ಸಂಕ್ಷಿಪ್ತ ಉತ್ತರ | 2 | 5ನಿ | ಕಠಿಣ |
| 18 | ಅರ್ಥವ್ಯವಸ್ಥೆಯ ಅರ್ಥ ಮತ್ತು ಪ್ರಕಾರಗಳು | ಜ್ಞಾನ | ಹೆಸರಿಸುವನು | ಸಂಕ್ಷಿಪ್ತ ಉತ್ತರ | 2 | 4ನಿ | ಸಾಮಾನ್ಯ |
| 19 | ವಾಣಿಜ್ಯ ಅಧ್ಯಯನ ಘಟಕಗಳು | ಜ್ಞಾನ | ಸ್ಮರಿಸುವನು | ಸಂಕ್ಷಿಪ್ತ ಉತ್ತರ | 2 | 4ನಿ | ಸಾಮಾನ್ಯ |
| 20 | ಭೌಗೋಳಿಕ ಲಕ್ಷಣಗಳು ಹಾಗೂ ಚರಿತ್ರೆ ಪೂರ್ವ ಭಾರತ<br>ಸಾರ್ವಜನಿಕ ಆಡಳಿತ | ತಿಳುವಳಿಕೆ | ವಿವರಿಸುವನು | ದೀರ್ಘ ಉತ್ತರ1 | 3 | 7ನಿ | ಕಠಿಣ |
| 21 | ಸಮಾಜಶಾಸ್ತ್ರ ಪರಿಚಯ<br>ಶಿಲಾಗೋಳ | ಜ್ಞಾನ | ಸ್ಮರಿಸುವನು | ದೀರ್ಘ ಉತ್ತರ1 | 3 | 6ನಿ | ಸುಲಭ |
| 22 | ಅರ್ಥವ್ಯವಸ್ಥೆಯ ಅರ್ಥ ಮತ್ತು ಪ್ರಕಾರಗಳು<br>ವಾಣಿಜ್ಯ ಅಧ್ಯಯನ ಘಟಕಗಳು | ಅನ್ವಯ | ಕಾರಣ ನೀಡುವನು | ದೀರ್ಘ ಉತ್ತರ1 | 3 | 7ನಿ | ಸಾಮಾನ್ಯ |
| 23 | ಭಾರತದ ಪ್ರಾಚೀನ ನಾಗರಿಕತೆಗಳು | ತಿಳುವಳಿಕೆ | ವಿವರಿಸುವನು | ದೀರ್ಘ ಉತ್ತರ2 | 4 | 10ನಿ | ಸಾಮಾನ್ಯ |
| 24 | ಭೂಮಿ–ನಮ್ಮ ಜೀವಂತ ಗ್ರಹ<br>ಶಿಲಾಗೋಳ | ಕೌಶಲ | ರಚಿಸುವನು ಮತ್ತು ಗುರುತಿಸುವನು | ಚಿತ್ರ ರಚನೆ | 2 | 6ನಿ | ಸುಲಭ |
| | | | | | 40 | 90ನಿ | |

# ಮಾದರಿ ಉತ್ತರ

| | |
|---|---|
| 1) | ಬಿ) ಅರಿಸ್ಟಾಟಲ್ |
| 2) | ಎ) ಇಂಡಿಕಾ |
| 3) | ಸಿ) ಶಾಸ್ತ್ರ/ವಿಜ್ಞಾನ |
| 4) | ಸಿ) ಮಿಶ್ರ ಆರ್ಥಿಕತೆ |
| 5) | ಎ) ಲ್ಯಾಟೀನ್ |
| 6) | ಡಿ) ಬಿ.ಆರ್. ಅಂಬೇಡ್ಕರ್ |
| 7) | ವಸ್ತುಗಳ ಉತ್ಪಾದನೆ, ಅವುಗಳ ವಿತರಣೆ ಹಾಗೂ ಸೇವೆಗಳನ್ನು ಒದಗಿಸುವ ಚಟುವಟಿಕೆಗಳನ್ನು ಆರ್ಥಿಕ ಚಟುವಟಿಕೆಗಳೆನ್ನುತ್ತೇವೆ. |
| 8) | ಮೆಕ್ಸಿಕೊದ ಯುಕಟೆನ್ ಪ್ರದೇಶದಲ್ಲಿನ ಅಮೆರಿಕದ ಇಂಡಿಯನ್ ಮೂಲನಿವಾಸಿಗಳಿಗೆ ಮಾಯ ಎನ್ನುವರು. |
| 9) | ಮೂರುಕಡೆ ನೀರಿನಿಂದಲೂ ಮತ್ತು ಒಂದು ಕಡೆ ಭೂಭಾಗದಿಂದಲೂ ಆವೃತವಾಗಿರುವುದರಿಂದ ಇದೊಂದು ಪರ್ಯಾಯ ದ್ವೀಪವಾಗಿದೆ. |
| 10) | ಭೂಮಿಯ ಮೇಲೆ ಜೀವಿಗಳ ವಾಸಿಸುವುದರಿಂದ ಜೀವಂತ ಗ್ರಹ ಎನ್ನುವರು. |
| 11) | ಮಾನವರು ಲೇಖನ ಕಲೆಯನ್ನು ಕಂಡು ಹಿಡಿಯುವುದಕ್ಕೆ ಮೊದಲಿನ ಕಾಲವನ್ನು ಪ್ರಾಗೈತಿಹಾಸಿಕ ಕಾಲವೆನ್ನುತ್ತೇವೆ. |
| 12) | ಮನೆ, ಕಟ್ಟಡ, ಶಾಲೆ, ಸೇತುವೆ, ರಸ್ತೆ, ಅಣೆಕಟ್ಟು, ಯಂತ್ರ, ಉತ್ಪಾದನಾ ವಿಭಾಗ, ಉದ್ದಿಮೆ, ತಂತ್ರಜ್ಞಾನ, ಕಂಪ್ಯೂಟರ್ ಇತ್ಯಾದಿ |
| 13) | ಇತಿಹಾಸ ರಚನೆಗೆ ಬೇಕಾಗುವ ಮೂಲ ಸಾಮಗ್ರಿಗಳೇ ಆಧಾರ. ಅಥವಾ ಈಜಿಪ್ಷಿಯನ್ನರ ಸಂರಕ್ಷಿಸಲ್ಪಟ್ಟ ದೇಹವನ್ನು 'ಮಮ್ಮಿ' ಎಂದು ಕರೆಯಲಾಗಿದೆ |
| 14) | ಚೀನಾದ ಹವಾಂಗೊ ನದಿಯು ಪ್ರವಾಹದ ನಂತರ ಆಗಿಂದಾಗ್ಗೆ ತನ್ನ ಹಾದಿಯನ್ನು ಬದಲಿಸುವುದರಿಂದ ಮನೆಗಳು ಹಾಗೂ ಕೃಷಿಭೂಮಿ ಈ ನೆರೆಗೆ ಆಹುತಿಯಾಗುತ್ತಿದ್ದವು. ಇದು ಅಲ್ಲಿನ ಕಾಲುವೆಗಳನ್ನೆಲ್ಲ ನಿಷ್ಕ್ರಿಯಗೊಳಿಸುತಿತ್ತು. ಈ ಕಾರಣಕ್ಕಾಗಿಯೆ ಅಲ್ಲಿನ ಜನ ಇದನ್ನು ದುಃಖದ ಪ್ರತೀಕವೆಂದು ಕರೆಯುತ್ತಾರೆ. |
| 15) | ರಾಜ್ಯಶಾಸ್ತ್ರದ ಜ್ಞಾನವು ಉತ್ತಮ ನಾಯಕರುಗಳನ್ನು ಮತ್ತು ಉತ್ತಮ ನಾಗರಿಕರನ್ನು ಸೃಷ್ಟಿಸುವಲ್ಲಿ ಸಹಕರಿಸುತ್ತದೆ.<br>ರಾಜ್ಯಶಾಸ್ತ್ರವು ರಾಜಕೀಯ ಸಂಸ್ಥೆಗಳಾದಂತಹ ರಾಜಕೀಯ ಪಕ್ಷಗಳು, ಒಕ್ಕೂಟಗಳು, ಸ್ಥಳೀಯ ಸಂಸ್ಥೆಗಳು ಇತ್ಯಾದಿಗಳನ್ನು ತಿಳಿಯಲು ಸಹಾಯಕವಾಗುತ್ತದೆ. |
| 16) | ಪ್ರತಿಯೊಂದು ಸಮಾಜವು ಸಾಂಸ್ಕೃತಿಕವಾಗಿ ವಿಭಿನ್ನವಾಗಿದೆ. ಸಂಸ್ಕøತಿ ಮತ್ತು ಸಮಾಜ ಇವೆರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಂಸ್ಕೃತಿಯು ಮಾನವನನ್ನು ಇತರ ಜೀವಿಗಳಿಂದ ಪ್ರತ್ಯೇಕಿಸುತ್ತದೆ. ಸಾಂಸ್ಕೃತಿಕ ನಿಯಮಗಳನ್ನು ಅನುಸರಿಸುವ ಮೂಲಕ ಒಂದು ಸಮಾಜದ ಸಾಮಾಜಿಕ ನಿಯಂತ್ರಣಗಳು ರೂಪುಗೊಳ್ಳುತ್ತವೆ. ಸಂಸ್ಕೃತಿಯು ಹುಟ್ಟು ಹಾಕುವ ಸಾಮಾಜಿಕ ನಿಯಮಗಳಿಗೂ ಸಮಾಜಕ್ಕೂ ನಿಕಟವಾದ ಸಂಬಂಧವಿರುತ್ತದೆ. |
| 17) | ಒಂದು ಸ್ಥಳದ ಸ್ಥಳದ ರೇಖಾಂಶ ಅಥವಾ ಸೂರ್ಯನ ಸ್ಥಾನಕ್ಕನುಸಾರವಾಗಿ ನಿರ್ಧರಿಸುವ ವೇಳೆಯನ್ನು 'ಸ್ಥಾನಿಕ ವೇಳೆ' ಎನ್ನುವರು.<br>ಏಕರೂಪದ ವೇಳೆಯು ಆ ದೇಶದ ಮಧ್ಯದಲ್ಲಿ ಹಾದುಹೋಗುವ ರೇಖಾಂಶದ ವೇಳೆಯನ್ನಾಧರಿಸಿರುತ್ತದೆ ಅಥವಾ ಆ ರೇಖಾಂಶದ ಮೇಲಿರುವ ಪ್ರಮುಖ ನಗರದ ವೇಳೆಯಾಗಿರುತ್ತದೆ. ಈ ವೇಳೆಯನ್ನು ದೇಶದ ಎಲ್ಲಾ ಭಾಗಗಳಲ್ಲೂ ಅನುಸರಿಸುವುದರಿಂದ ಇದನ್ನು ಆದರ್ಶ ವೇಳೆ ಎಂದು ಕರೆಯುತ್ತಾರೆ. |
| 18) | (i) ಅಭಿವೃದ್ಧಿ ಹೊಂದಿದ ಅರ್ಥವ್ಯವಸ್ಥೆ ಮತ್ತು (ii) ಅಭಿವೃದ್ಧಿ ಹೊಂದುತ್ತಿರುವ ಅರ್ಥವ್ಯವಸ್ಥೆ. |
| 19) | ಸಾಗಾಣಿಕೆ, ವಿಮೆ, ಬ್ಯಾಂಕಿಂಗ್, ಉಗ್ರಾಣ ವ್ಯವಸ್ಥೆ, ಜಾಹೀರಾತು ಮುಂತಾದವು. |
| 20) | ಸುಮಾರು 12,000 ವರ್ಷಗಳ ಹಿಂದೆ ಭೂ ಮಂಡಲದ ತಾಪಮಾನವು ಮತ್ತಷ್ಟು ಹೆಚ್ಚಿತು. ಹಲವೆಡೆ ಇದು ಹುಲ್ಲುಗಾವಲಿನ ಬೆಳವಣಿಗೆಗೆ ಕಾರಣವಾಯಿತು. ಪ್ರಾಣಿ ಪಕ್ಷಿಗಳು ಸಂತತಿಯು ಹೆಚ್ಚಾಗತೊಡಗಿದವು. ಇವನ್ನೇ ಬೇಟೆಯಾಡುತ್ತಿದ್ದ ಮಾನವರು ಅವುಗಳ ಸ್ವಭಾವ, ಆಹಾರ ರೀತಿ ಹಾಗೂ ಸಂತತಿ ವೃದ್ಧಿಯ ಬಗ್ಗೆ ತಿಳಿದುಕೊಂಡರು.<br><br>ನೇರ ನೇಮಕಾತಿ : ನೇಮಕಾತಿ ವಿಧಾನಗಳಲ್ಲಿ ನೇರ ನೇಮಕಾತಿ ಜನಪ್ರಿಯ ಹಾಗೂ ವೈಜ್ಞಾನಿಕ ವಿಧಾನವಾಗಿದೆ. ಅರ್ಹ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನಿಶ್ಚಿತ ರೀತಿಯಲ್ಲಿ ಆಯ್ಕೆ ಮಾಡುವುದೇ ನೇರ ನೇಮಕಾತಿಯಾಗಿರುತ್ತದೆ. ಈ ಮೂಲಕ ಸೇವೆಗೆ ಸೇರಬೇಕಾದ ಅಭ್ಯರ್ಥಿಗಳು ಕೆಲವು ಸಾಮಾನ್ಯ ಅರ್ಹತೆಗಳನ್ನು ಹಾಗೂ ವಿಶೇಷ ಅರ್ಹತೆಗಳನ್ನು ಹೊಂದಿರಬೇಕು.<br>ಆಂತರಿಕ ನೇಮಕಾತಿ : ಸರ್ಕಾರಿ ಸೇವೆಯಲ್ಲಿ ಇದ್ದವರಲ್ಲಿ |

| | | |
|---|---|---|
| | ಕ್ರಮೇಣವಾಗಿ ಈ ಕೆಲಪ್ರಾಣಿಗಳನ್ನು ಹಿಡಿದು ತಂದು ಪೋಷಿಸತೊಡಗಿದರು. ಹೀಗೆ ಪಶುಸಂಗೋಪನೆ ಮತ್ತು ಹೈನುಗಾರಿಕೆಯು ಪ್ರಾರಂಭವಾಯಿತು. | ಅರ್ಹರಾದವರನ್ನು ಮೇಲ್ದರ್ಜೆಯ ಹುದ್ದೆಗಳಿಗೆ ಆಯ್ಕೆ ಮಾಡುವುದೇ ಆಂತರಿಕ ನೇಮಕಾತಿಯಾಗಿರುತ್ತದೆ. ಇಂತಹ ಪದ್ಧತಿಯನ್ನು ಸಾಮಾನ್ಯವಾಗಿ ಎಲ್ಲಾ ರಾಷ್ಟ್ರಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಪದ್ಧತಿಯು ಭಾರತದಲ್ಲಿಯೂ ಜಾರಿಯಲ್ಲಿದೆ. |
| **21)** | ❖ ಸಮಾಜಶಾಸ್ತ್ರವು ವೈಜ್ಞಾನಿಕವಾಗಿ ಮಾನವ ಸಮಾಜವನ್ನು ಅಧ್ಯಯನ ಮಾಡುತ್ತದೆ<br>❖ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕ<br>❖ ಸಾಮಾಜಿಕ ಪ್ರಕ್ರಿಯೆಗಳ ಪರಿಚಯ<br>❖ ಸಾಮಾಜಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಪರಿಹಾರ ಕಂಡುಕೊಳ್ಳುವಲ್ಲಿ ಸಹಾಯಕ<br>❖ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಸಮಾಜಶಾಸ್ತ್ರ ಸಹಕಾರಿಯಾಗಿದೆ | ಆಳವಾದ ಕಂದರಗಳು, ಮಹಾಕಂದರ 'V' ಆಕಾರದ ಕಣಿವೆಗಳು, ಜಲಪಾತಗಳು, ಕುಂಭಕಳಿಗಳು, ಮೆಕ್ಕಲು ಬೀಸಣಿಗೆ, ನದಿಯ ತಿರುವುಗಳು, ಪ್ರವಾಹ ಮೈದಾನ,ಸ್ವಾಭಾವಿಕ ದಡಕಟ್ಟೆ, ಶೃಂಗ ಸರೋವರ, ಮುಖಜಭೂಮಿ. |
| **22)** | ❖ ಸಂಪನ್ಮೂಲಗಳ ಕೊರತೆಯನ್ನು ಪರಿಗಣಿಸುವುದು<br>❖ ಸಂಪನ್ಮೂಲಗಳ ಉಪಯೋಗದಲ್ಲಿ ಆದ್ಯತೆ ನೀಡುವುದು<br>❖ ಸಂಪನ್ಮೂಲಗಳ ಉಪಯೋಗದಲ್ಲಿ ಮಿತವ್ಯಯ (ಉಳಿತಾಯ) ಮಾಡುವುದು<br>❖ ಪ್ರತಿ ವ್ಯಕ್ತಿಯು ತನ್ನ ಕುಟುಂಬ ಮತ್ತು ರಾಷ್ಟ್ರದ ಏಳ್ಗೆಗಾಗಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗುವುದು<br>❖ ಸರ್ಕಾರದ ಆದಾಯಕ್ಕೆ ಕೊಡುಗೆಯನ್ನು ನೀಡುವುದು<br>❖ ರಾಷ್ಟ್ರದಲ್ಲಿನ ಸಾಮಾಜಿಕ–ಆರ್ಥಿಕ ಸಮಸ್ಯೆಗಳನ್ನು ತಿಳಿಯಲು ಮತ್ತು ಅವುಗಳಿಗೆ ಪರಿಹಾರವನ್ನು ಒದಗಿಸಲು | ❖ ಬಯಕೆಗಳ ಮರು ಹೊಂದಾಣಿಕೆಯ ಕೊರತೆ<br>❖ ಮೌಲ್ಯದ ಅಳತೆ ಸಮರ್ಪಕವಾಗಿ ಇಲ್ಲದೆ ಇರುವುದು<br>❖ ವಸ್ತುಗಳನ್ನು ವಿಭಜಿಸುವ ಕೊರತೆ<br>❖ ವಸ್ತುಗಳ ಸಾಗಾಣಿಕೆಯ ಸಮಸ್ಯೆ<br>❖ ವಸ್ತುಗಳ ಸಂಗ್ರಹದ ಸಮಸ್ಯೆ |
| **23)** | ❖ ಕ್ರಮಬದ್ಧವಾಗಿ ನಿರ್ಮಿಸಲಾದ ಮನೆಗಳನ್ನು, ರಸ್ತೆಗಳನ್ನು ಹಾಗೂ ಚರಂಡಿಗಳನ್ನು ನಾವು ಇಲ್ಲಿ ಕಾಣಬಹುದು.<br>❖ ಸಾಮಾನ್ಯವಾಗಿ ಜನರು ಒಂದು ಅಥವಾ ಎರಡು ಅಂತಸ್ತಿನ ಮನೆಯನ್ನು ಹೊಂದಿದ್ದರು.<br>❖ ಮನೆಗಳು ಇಟ್ಟಿಗೆಗಳಿಂದ ಕಟ್ಟಲ್ಪಟಿದ್ದು, ಅವುಗಳ ಗೋಡೆಯು ಭದ್ರವಾಗಿದ್ದವು. ಒಳಾಂಗಣದ ಸುತ್ತ ಕೊಠಡಿಗಳು ಇದ್ದವು.<br>❖ ಮನೆಗಳು ಸ್ನಾನದ ಕೊಠಡಿಗಳನ್ನು ಹೊಂದಿದ್ದವು. ಕೆಲವೊಂದರಲ್ಲಿ ಬಾವಿಗಳಿದ್ದು ಅವುಗಳಿಂದ ನೀರಿನ ಪೂರೈಕೆಯಾಗುತ್ತಿತ್ತು.<br>❖ ನಗರಗಳು ಒಳಚರಂಡಿ ವ್ಯವಸ್ಥೆಯನ್ನು ಹೊಂದಿದ್ದವು. ಇಟ್ಟಿಗೆಯಿಂದ ನಿರ್ಮಿಸಲಾಗಿದ್ದ ಚರಂಡಿಯನ್ನು ಚಪ್ಪಡಿಗಳಿಂದ ಮುಚ್ಚಲಾಗಿತ್ತು.<br>❖ ಮನೆಯ ಮೋರಿಗಳನ್ನು ಹೊರಗಿನ ಚರಂಡಿಗೆ ಹೊಂದಿಸಲಾಗಿತ್ತು.<br>❖ ಮನೆ ಬಳಕೆಯ ಹಾಗೂ ಸ್ನಾನದಲ್ಲಿ ಬಳಸಿದ ಕಲುಷಿತ ನೀರು ಮೋರಿಯ ಮೂಲಕ ಚರಂಡಿಗೆ ಬಂದು ಸೇರುತ್ತಿದ್ದವು.<br>❖ ಚರಂಡಿಗಳನ್ನು ಕಾಲದಿಂದ ಕಾಲಕ್ಕೆ ಶುಚಿಯಾಗಿಡಲು ಅಲ್ಲಲ್ಲಿ ರಂಧ್ರಗಳನ್ನು ನಿರ್ಮಿಸಿದ್ದರು. | |
| **24)** | <br> | |